ಎಂ ವಿ ಸಿ ನಂ. 637/2023 – –

ಪಿ ಡಬ್ಲ್ಯೂ –1

ದಿನಾಂಕಃ 01.07.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ –

ಎಫ್.ಐ.ಆರ್, ದೂರು, ಪಂಚನಾಮೆ, ಎಂ ವಿ ಸಿ ಆರ್ ಹಾಗೂ ಅಂತಿಮ ವರದಿಯ ಧೃಡೀಕೃತ ನಕಲಗಳನ್ನು ಹಾಜುರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 1 ಎಂದು ಗುರುತಿಸಲಾಯಿತು. ಅಂಗನ್ಯೂನತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–2 ಎಂದು ಗುರುತಿಸಲಾಯಿತು. Treatment certificate ಅನ್ನು ನಿಪಿ–3, Discharge summary ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–4 ಎಂದು ಗುರುತಿಸಲಾಯಿತು. ಒಪಿ ದಾಖಲೆಗಳನ್ನು ಒಟ್ಟಾಗಿ ನಿಪಿ–5 ಎಂದು, NCCT Report ಅನ್ನು ನಿಪಿ–6, 2 ರೇಡಿಯೋಲಾಜಿ ವರದಿಯನ್ನು ಒಟ್ಟಾಗಿ ನಿಪಿ–7, 3 X–Ray films ಗಳನ್ನು ಹಾಜರುಪಡಿಸಿದ್ದು ಒಟ್ಟಾಗಿ ನಿಪಿ–8 ಎಂದು ಗುರುತಿಸಲಾಯಿತು. ಮೆಡಿಕಲ್ ಬಿಲ್ಲುಗಳನ್ನು ಮತ್ತು ವೈದ್ಯರ ಸಲಹಾ ಚೀಟಿಗಳನ್ನು ಹಾಜುರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 9 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ –

1 ನೇ ಎದುರುದಾರ ನನ್ನ ಸಂಬಂಧಿ. 2 ನೇ ಎದುರುದಾರ 1 ನೇ ಎದುರುದಾರನ ಮಗ. 2 ನೇ ಎದುರುದಾರ ನನ್ನ ತಮ್ಮನ ಮಗನಾಗಿರುತ್ತಾನೆ. ದೂರನ್ನು ಯಾರು ಪೊಲೀಸರಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅಪಘಾತವಾದ ಕೂಡಲೇ ದಾವಣಗೆರೆಯ ಆರೈಕೆ ಆಸ್ಪತ್ರೆಗೆ ಮೊದಲು ಹೋಗಿದ್ದೆನು. ನಂತರ ನಾನು ಮಣಿಪಾಲ ಆಸ್ಪತ್ರೆಗೆ ಹೋಗಿದ್ದೆನು. ಆಸ್ಪತ್ರೆಗೆ ನನ್ನ ಮಕ್ಕಳು ಹಾಗೂ ಸಂಬಂಧಿಕರು ಬಂದಿರುತ್ತಾರೆ. ಸದರಿ ಎರಡು ಆಸ್ಪತ್ರೆಯ ದಾಖಲೆಗಳಲ್ಲಿ ಬರೆದ ವಿಚಾರ ಸತ್ಯವಾಗಿದೆ. ನನಗೆ ಒಟ್ಟು 3 ಜನ ಮಕ್ಕಳು ನಾಗರಾಜ, ಸುರೇಶ ಮತ್ತು ಗೀತಾ. ನನ್ನ 3 ಜನ ಮಕ್ಕಳು ದಾವಣಗೆರೆಯ ಆರೈಕೆ ಆಸ್ಪತ್ರೆಗೆ ಮೊದಲು ಬಂದಿದ್ದರು. ನನಗೆ ಅಪಘಾತವಾದ ದಿನವೇ ಪೋಲಿಸರಿಗೆ ದೂರು ನೀಡಿರುತ್ತೇನೆ. ಸದರಿ ದೂರಿನ ಪ್ರತಿ ಹಾಜರುಪಡಿಸಲು ತೊಂದರೆ ಇಲ್ಲ. ತಾಃ 3.7.2022 ರಂದು ಬೆಳಿಗ್ಗೆ 9.30 ಗಂಟೆಗೆ ಕೆಎ 17 ಇಜೆ 8512 ವಾಹನದಲ್ಲಿ ನಾನು ಹಿಂಬದಿ ಸವಾರರಾಗಿ ಹೋಗುತ್ತಿದ್ದಾಗ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರ ಸದರಿ ವಾಹನವನ್ನು ಓಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಎದುರುದಾರ ಹಾಗೂ ನನ್ನ ಸಂಬಂಧಿಕರು ಸೇರಿಕೊಂಡು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಆ ಕಾರಣದಿಂದ 3 ದಿನ ತಡವಾಗಿ ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹಾಗೂ ಪೂಲೀಸ್ ದಾಖಲೆಗಳ ಪ್ರಕಾರ ಅಪಘಾತ ಆಗಿದ್ದಲ್ಲಿ ಅದೇ ದಿನ ನಾನು ದೂರು ನಿಡುತ್ತಿದ್ದೆ ಎಂದರೆ ಸರಿಯಲ್ಲ. ಅಪಘಾತವಾದ ಕೂಡಲೇ ನಾನು ಎಚ್ಚರ ತಪ್ಪಿದೆನು. ಅಪಘಾತದಲ್ಲಿ ನನಗೆ ತೀವ್ರತರವಾದ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗೆ ಯಾವುದೇ ವಚ್ಚ ಮಾಡಿಲ್ಲ ಎಂದರೆ ಸರಿಯಲ್ಲ. ಆರೈಕೆ ಆಸ್ಪತ್ರೆಯಲ್ಲಿ ಬೈಕ್ ನಂಬರ್ ಹಾಗೂ 1 ನೇ ಎದುರುದಾರನ ಹೆಸರನ್ನು ಹೇಳಿ ಬರೆಸಿರುತ್ತೇನೆ. ನನಗೆ ಅನುಕೂಲಕರ ರೀತಿಯಲ್ಲಿ ವೈದ್ಯರ ಜೊತೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ವೈದ್ಯಕೀಯ ಹಾಗೂ ಪೊಲೀಸ್ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕಾರಣಗಳಿಂದ ವಿಮಾ

ಕಂಪನಿಯವರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ಅಪಘಾತವಾದ 6 ತಿಂಗಳ ನಂತರ ದೂರು ದಾಖಲಿಸುವ ಕಾರಣ ಈ ಅರ್ಜಿ ಊರ್ಜಿತ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ